ಮೇಲ್ದರ್ಜೆಗೇರಿಸುವ ಕಾರ್ಯಕ್ರಮಕ್ಕೆ ಯಾವುದೇ ಕಾಲ ನಿಗದಿಪಡಿಸಿಲ್ಲ. ಅವಶ್ಯಕತೆಗನುಗುಣವಾಗಿ ಪದವೀಧರರ ಪಶುವೈದ್ಯರ ಲಭ್ಯತೆ ಮೇಲೆ ಮೇಲ್ದರ್ಜೆಗೇರಿಸಲಾಗುತ್ತಿದ್ದು, ಮೇಲ್ದರ್ಜೆಗೇರಿಸುವ ವೇಳೆಯಲ್ಲಿ ಮೇಲ್ಕಂಡ ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಸಹ ಆದ್ಯತೆ ಮೇಲೆ ಪರಿಗಣಿಸಲಾಗುವುದು.

1131 (757) ಶ್ರೀಮತಿ ಪರಿಮಳ ಕೆ.ಎಸ್. (ಹನೂರು) :– ಮಾನ್ಯ ಪಶುಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2004–05ನೇ ಸಾಲಿನಿಂದ 2006–07ನೇ ಸಾಲಿನವರೆಗೆ ಪಶುಪಾಲನೆಗೆ ಔಷಧಿ ಖರೀದಿಸಲು ಒದಗಿಸಲಾದ ಅನುದಾನ ಎಷ್ಟು?

(ಆ) ಈ ಪೈಕಿ ಹನೂರು ವಿಧಾನ ಸಭಾ ಕ್ಷೇತ್ರದ ಪಶು ಆಸ್ಪತ್ರೆಗಳಿಗೆ ಒದಗಿಸಲಾದ ಪ್ರಮಾಣ ಎಷ್ಟು? (ಆಸ್ಪತ್ರೆವಾರು ವಿವರ ನೀಡುವುದು)

ಶ್ರೀ ರೇವೂ ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು)

(ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ 2004–05ನೇ ಸಾಲಿನಿಂದ 2006–07ನೇ ಸಾಲಿನ ಒಟ್ಟಾರೆ 4162.33 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ವರ್ಷಾವಾರು ವಿವರ ಈ ಕೆಳಗಿನಂತಿದೆ.

ವರ್ಷದ ವಿವರ	ರಾಜ್ಯವಲಯ ರೂ.ಲಕ್ಷಗಳಲ್ಲಿ	ಜಿಲ್ಲಾವಾರು ರೂ.ಲಕ್ಷಗಳಲ್ಲಿ	ಒಟ್ಟು ರೂ.ಲಕ್ಷಗಳಲ್ಲಿ
2004–05	585.00	410.00	995.00
2005–06	1060.00	461.0	1521.00
2006–07	1136.33	510.0	1646.33
ಒಟ್ಟು	2781.33	1381.0	4162.33

(ಆ) ಈ ಪೈಕಿ ಹನೂರು ವಿಧಾನಸಭಾ ಕ್ಷೇತ್ರದ 13 ಪಶುವೈದ್ಯ ಸಂಸ್ಥೆಗಳಿಗೆ ಒಟ್ಟಾರೆ 10.392 ಲಕ್ಷ ರೂ.ಗಳ ಔಷಧಿ ರಾಸಾಯನಿಕಗಳನ್ನು ಒದಗಿಸಲಾಗಿದೆ. ಆಸ್ಪತ್ರೆವಾರು, ವರ್ಷವಾರು ವಿವರಗಳನ್ನು ಅನುಬಂಧ–1ರಲ್ಲಿ ಸಲ್ಲಿಸಿದೆ.

ಅನುಬಂಧ–1

ಪ್ರಶ್ನೆ ಸಂಖ್ಯೆ 757 **ಶ್ರೀಮತಿ ಪರಿಮಳ ಕೆ.ಎಸ್. (ಹನೂರು)**

ಹನೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳಿಗೆ ಸರಬರಾಜಾದ ಔಷಧಿ ಮೊತ್ತದ ವಿವರ

ಕ್ರ.ಸಂ.	ಸಂಸ್ಥೆಯ ಹೆಸರು	2004–05	2005–06	2006–07	ಒಟ್ಟು
1	ಪಶು ಆಸ್ಪತ್ರೆ, ಹನೂರು	51118	23834	100662	175614
2	ಪಶು ಚಿಕಿತ್ಸಾಲಯ, ಕೌದಳ್ಳಿ	32794	13563	63578	109935
3	ಪಶುಚಿಕಿತ್ಸಾಲಯ, ಲೊಕ್ಕನಹಳ್ಳಿ	32794	13563	63578	109935
4	ಪಶುಚಿಕಿತ್ಸಾಲಯ, ರಾಮಾಪುರ	32794	13563	63578	109935
5	ಪಶು ಚಿಕಿತ್ಸಾಲಯ, ಕಾಮಗೆರೆ	18791	6616	63578	88985
6	ಪ್ರಾಥಮಿಕ ಪಶು ಚಿಕಿತ್ಸಾಲಯ, ದೊಡ್ಡಿಂದುವಾಡಿ	18791	6616	30188	55595
7	ಪ್ರಾಥಮಿಕ ಪಶು ಚಿಕಿತ್ಸಾಲಯ, ತೆಳ್ಳನೂರು	18791	6616	30188	55595
8	ಪ್ರಾಥಮಿಕ ಪಶು ಚಿಕಿತ್ಸಾಲಯ, ಬಂಡಳ್ಳಿ	18791	6616	30188	55595
9	ಪ್ರಾಥಮಿಕ ಪಶು ಚಿಕಿತ್ಸಾಲಯ, ಸಿಂಗಾನಲ್ಲೂರು	18791	6616	30188	55595
10	ಪ್ರಾಥಮಿಕ ಪಶು ಚಿಕಿತ್ಸಾಲಯ ಎಂ.ಎಂ.ಹಿಲ್ಸ್	18791	6616	30188	55595
11	ಪ್ರಾಥಮಿಕ ಪಶು ಚಿಕಿತ್ಸಾಲಯ ಒಡೆಯರ ಪಾಳ್ಯ	18791	6616	30188	55595
12	ಪ್ರಾಥಮಿಕ ಪಶು ಚಿಕಿತ್ಸಾಲಯ ಮಾರ್ಟಳ್ಳಿ	18791	6616	30188	55595
13	ಪ್ರಗ್ರಾಯೋ ಉಪ ಕೇಂದ್ರ, ಗುಂಡೇಗಾಲ	18791	6616	30188	55595
	ಒಟ್ಟು	**318619**	**124067**	**596478**	**1039164**